ಓ ಎಸ್ ನಂಃ 54-17
ಪಿ ಡಬ್ಲ್ಯೂ ಃ 1

ದಿಃ 12-01-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಜಿ ಪಿ ವಕೀಲರಿಂದ

16. ನಾನು ತಾವರೆಕೆರೆಯಲ್ಲಿ ಇರುತ್ತಿದ್ದು 1 ರಿಂದ 3ನೇ ಪ್ರತಿವಾದಿಗಳು ಸಹ ತಾವರೆಕೆರೆಯಲ್ಲಿರುತ್ತಾರೆ. ಮೊದಲಿನಿಂದಲೂ ನನಗೆ 1 ಮತ್ತು 2ನೇ ಪ್ರತಿವಾದಿಗಳ ಪರಿಚಯವಿದೆ. ಮೊದಲು ನಾನು ಮತ್ತು 1 ರಿಂದ 3ನೇ ಪ್ರತಿವಾದಿಗಳು ವಿಶ್ವಾಸದಿಂದ ಇದ್ದೆವು ಎಂದರೆ ನಿಜ. ನನ್ನ ಮನೆಯಲ್ಲಿ ಆದ ಸಮಾರಂಭಕ್ಕೆ 1 ರಿಂದ 3ನೇ ಪ್ರತಿವಾದಿಗಳು ಬರುತ್ತಿದ್ದರು ಮತ್ತು ಅವರ ಮನೆಯ ಸಮಾರಂಭಕ್ಕೆ ನಾನು ಹೋಗುತ್ತಿದ್ದೆ ಎಂದರೆ ಅವರು ಅಪರೂಪಕ್ಕೆ ಬರುತ್ತಿದ್ದರು ಎಂದು ಹೇಳುತ್ತಾರೆ. ನನ್ನ ಮನೆಯಿಂದ 1 ರಿಂದ 3ನೇ ಪ್ರತಿವಾದಿಗಳ ಮನೆ 1–1 1/2 ಪರ್ಲಾಂಗ್ ದೂರ ಆಗುತ್ತದೆ ಎಂದರೆ 1 ಕಿ ಮೀ ದೂರ ಆಗುತ್ತದೆ ಎಂದು ಹೇಳುತ್ತಾರೆ. ನಾನು 1 ರಿಂದ 3ನೇ ಪ್ರತಿವಾದಿಗಳ ಸಹಿಗಳನ್ನು ನೋಡಿದ್ದು ಅವರ ಸಹಿಗಳನ್ನು ಗುರುತಿಸಬಲ್ಲೆ. ಸಾಕ್ಷಿಗೆ ಈಗ ದಿನಾಂಕಃ 07-02-2014ರ ನೊಂದಾಯಿತ ಕ್ರಯಪತ್ರದಲ್ಲಿಯ 1 ರಿಂದ 3ನೇ ಪ್ರತಿವಾದಿಗಳ ಫೋಟೋಗಳನ್ನು ಮತ್ತು 1 ರಿಂದ 3ನೇ ಪ್ರತಿವಾದಿಗಳ ಸಹಿಗಳನ್ನು ತೋರಿಸಲಾಗಿ ಅವುಗಳನ್ನು ಒಪ್ಪಿದ್ದು ಅವುಗಳನ್ನು ನಿಡಿ 1 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸುಳ್ಳು ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ದಿನಾಂಕಃ 18-07-2013ರ ಕ್ರಯದ ಕರಾರು ಪತ್ರವನ್ನು ತೋರಿಸಲಾಗಿ ಅದನ್ನು ಬರೆದಿದ್ದು ನಿಜ ಆದರೆ ಅದರಲ್ಲಿರುವ ಸಹಿಗಳು 1 ರಿಂದ 3ನೇ ಪ್ರತಿವಾದಿಗಳ ಸಹಿಗಳು ಅಲ್ಲ ಎಂದು ಸಾಕ್ಷಿ ಹೇಳುತ್ತಾರೆ. ದಿನಾಂಕಃ 18-07-2013ರ ಪತ್ರ ಆದಾಗ ನಾನು ಇರಲಿಲ್ಲ ಅದಕ್ಕೆ ಸಹಿ ಮಾಡಿಲ್ಲ. ದಿನಾಂಕಃ 18-07-2013ರ ಕ್ರಯದ ಕರಾರು ಪತ್ರವನ್ನು ಮೂರು ಕ್ರಯದ ಕರಾರು ಪತ್ರದಲ್ಲಿ 3 ಹಾಳೆಯಲ್ಲಿ ಪಡೆದು ಒಂದೇ ದಿನ ಬರೆಯಲಾಗಿದೆ ಎಂದರೆ ನಿಜ. ಈ ಕ್ರಯಪತ್ರವನ್ನು 1 ರಿಂದ 3 ಮತ್ತು 5ನೇ ಪ್ರತಿವಾದಿಗಳ ಹೆಸರಿನಲ್ಲಿ ಪಡೆಯಲಾಗಿದೆ ಎಂದರೆ ಇರಬಹುದು ಗೊತ್ತಿಲ್ಲ, ಆದರೆ ಸಹಿಗಳು ಅವರದ್ದಲ್ಲ ಎಂದು ಹೇಳುತ್ತಾರೆ. ಈ ಪತ್ರಕ್ಕೆ ಸಹಿ ಮಾಡುವಾಗ ನಾನು ಇದ್ದೆನಾ ಎಂದರೆ ಅದು ಬರೆದ ವಿಷಯವೇ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ಪತ್ರದ ಬಗ್ಗೆ 1 ರಿಂದ 3ನೇ ಪ್ರತಿವಾದಿಗಳು ತಕರಾರು ಹೇಳಿ ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದರೆ ಅದರ ಬಗ್ಗೆ ನನಗೆ ಏನು ಗೊತ್ತಿಲ್ಲ ಎಂದು ಹೇಳುತ್ತಾರೆ. ದಿನಾಂಕಃ 18-07-2013ರ ಕ್ರಯಪತ್ರದ ಮೇಲೆ 1 ರಿಂದ 3 ಮತ್ತು 5ನೇ ಪ್ರತಿವಾದಿಗಳ ವಿರುದ್ದ ಕೇಸನ್ನು ಹಾಕಿರುತ್ತೇನಾ ಎಂದರೆ ಆ ಕ್ರಯದ ಕರಾರು ಪತ್ರದ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ದಾವೆಯನ್ನು ಪ್ರತಿವಾದಿಗಳ ವಿರುದ್ದ

ಹೂಡಿದ್ದು ಈ ದಾವೆ ಹೂಡಿದ ನಂತರ ಅವರನ್ನು ನ್ಯಾಯಾಲಯಕ್ಕೆ ಬಂದು ಹೇಳಿಕೆ ಕೊಡಬೇಕೆಂದು ನಾನು ಕರೆದಿಲ್ಲ.

**17.** ದಿನಾಂಕಃ **18-03-2013** ರ ಕ್ರಯದ ಕರಾರು ಪತ್ರದ ಆಧಾರದ ಮೇರೆಗೆ ದಾವಾ ಆಸ್ತಿ **4** ಮತ್ತು **5** ನೇ ಪ್ರತಿವಾದಿಗಳಿಗೆ **18** ಲಕ್ಷ ರೂಗಳಿಗೆ ಕರಾರು ಪತ್ರ ಆಗಿರುತ್ತದೆ ಎಂದರೆ ಅದು ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಅದರ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಿನಾಂಕಃ **18-03-2013** ರ ಕ್ರಯದ ಕರಾರು ಪತ್ರದ ಬಗ್ಗೆ ನಾನು **1** ರಿಂದ **3** ನೇ ಪ್ರತಿವಾದಿಗಳ ಮುಂದೆ ಪ್ರಸ್ತಾಪ ಮಾಡಿಲ್ಲ. ಕ್ರಯದ ಕರಾರು ಪತ್ರ ಆದ ದಿನ ಒಟ್ಟು **11 1/2** ಲಕ್ಷ ರೂ ಹಣವನ್ನು ಕೊಡಲಾಗಿದೆ ಎಂದರೆ ಅವು ನನ್ನ ಕಣ್ಣ ಮುಂದೆ ನಡೆದಿಲ್ಲ ಎಂದು ಹೇಳುತ್ತಾರೆ. ದಿನಾಂಕ್ಷ **18-03-2013** ರ ಕ್ರಯಪತ್ರದಡಿಯಲ್ಲಿ ಬಾಕಿ ಹಣವನ್ನು ಪಡೆದು **1** ರಿಂದ **3** ನೇ ಪ್ರತಿವಾದಿಗಳು **4** ಮತ್ತು **5** ನೇ ಪ್ರತಿವಾದಿಗಳ ಹೆಸರಿಗೆ ದಾವಾ ಆಸ್ತಿಯ ಮೇಲೆ ನೊಂದಾಯಿತ ಕ್ರಯಪತ್ರವನ್ನು ದಿನಾಂಕಃ **07-02-2014** ರಂದು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಖಾತೆ ಈಗ **4** ಮತ್ತು **5** ನೇ ಪ್ರತಿವಾದಿಗಳ ಹೆಸರಿನಲ್ಲಿರುತ್ತದೆ, ಅವರು ವಿದ್ಯುತ್‌ಚ್ಛಕ್ತಿ ಸಂಪರ್ಕ ಪಡೆದಿರುತ್ತಾರೆ ಮತ್ತು ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಅವರು ಏನು ಮಾಡಿರುತ್ತಾರೋ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಬಗ್ಗೆ ಇದುವರೆಗೂ ಪಂಚಾಯ್ತಿಯಲ್ಲಿ ಏನು ಆಗಿರುತ್ತದೆ ಮತ್ತು ವಿದ್ಯುತ್‌ಚ್ಛಕ್ತಿ ಕಛೇರಿಯಲ್ಲಿ ಏನು ಆಗಿರುತ್ತದೆ ನಾನು ನೋಡಿಲ್ಲ.

**18.** ನನ್ನ ಹೆಸರಿಗೆ ಕ್ರಯದ ಕರಾರು ಪತ್ರ ದಿನಾಂಕಃ **21-08-2013** ರಂದು ಆಗಿರುತ್ತದೆ. ಕ್ರಯದ ಕರಾರು ಪತ್ರವನ್ನು ತಾವರೆಕೆರೆಯ ನೊಂದಣಿ ಕಛೇರಿಯಲ್ಲಿ ಇದ್ದ ಸ್ಟಾಂಪ್ ವೆಂಡರ್ ಸಾಕರಾಜು ಬರೆದಿರುತ್ತಾರೆ. ಕ್ರಯದ ಕರಾರು ಪತ್ರವನ್ನು ಬರೆಯುವಾಗ ಚೆಕ್ ಮೂಲಕ **3 1/2** ಲಕ್ಷ ರೂ ಹಣವನ್ನು ಮತ್ತು **8** ಲಕ್ಷ ರೂ ನಗದು ಹಣ **4** ಮತ್ತು **5** ನೇ ಪ್ರತಿವಾದಿಗಳಿಗೆ ಸೇರಿರುವ ಬಗ್ಗೆ ನಾನು **1** ರಿಂದ **3** ನೇ ಪ್ರತಿವಾದಿಗಳ ಸಮಕ್ಷಮ ಪ್ರಸ್ತಾಪ ಮಾಡಿರುತ್ತೇನಾ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಹೆಸರಿಗೆ ನಿಪಿ3 **18** ಲಕ್ಷ ರೂಗಳಿಗೆ ಆಗಿರುತ್ತದೆ. ನನ್ನ ಹೆಸರಿಗೆ ಬ್ಯಾಂಕ್ ಖಾತೆ ಇದ್ದು ಬ್ಯಾಂಕ್ ಖಾತೆಯಲ್ಲಿ ಹಣವಿರಲಿಲ್ಲ ಮನೆಯಿಂದ ಹಣವನ್ನು ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಹಣ ಮನೆಯಲ್ಲಿ ಇದ್ದಿದ್ದರ ಬಗ್ಗೆ ನನ್ನ ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ನಿಜ. ಮನೆಯಲ್ಲಿ ಅಷ್ಟೊಂದು ಹಣ ಹೇಗೆ ಬಂತು ಎಂಬುದರ ಬಗ್ಗೆ ನನ್ನ ವಾದಪತ್ರದಲ್ಲಿ ಬರೆದಿಲ್ಲ ಎಂದರೆ ನಿಜ. ನಿಡಿ **3** ಆದಾಗ ಪೂರ್ತಿ **18** ಲಕ್ಷ ರೂ ಹಣವನ್ನು **1** ರಿಂದ **3** ನೇ ಪ್ರತಿವಾದಿಗಳಿಗೆ ಕೊಟ್ಟಿಲ್ಲ. ನಾನು **1** ರಿಂದ **3** ನೇ ಪ್ರತಿವಾದಿಗಳಿಗೆ **500** ರೂ ಹಣ ಮತ್ತು **1000** ರೂ ಮುಖಬೆಲೆಯುಳ್ಳ ನೋಟುಗಳನ್ನು ಬಂಡಲ್ ಮಾಡಿ ಕೊಟ್ಟಿರುತ್ತೇನೆ. ಇಷ್ಟೊಂದು ಹಣ ನಾನು ಸಂಪಾದನೆ ಮಾಡಿ ಕೂಡಿಟ್ಟ ಹಣ

ಆಗಿರುತ್ತದೆ. ನನ್ನದು ಟೂರಿಸ್ಟ್ ಅಂಗಡಿ ಇದ್ದು ಅದರಿಂದ ಸಂಪಾದನೆ ಮಾಡಿರುತ್ತೇನೆ. ನನ್ನ ಟೂರಿಸ್ಟ್ ಅಂಗಡಿ ನೊಂದಣಿಯಾಗಿರುವುದಿಲ್ಲ. ನಾನು ನನ್ನ ಟೂರಿಸ್ಟ್ ಅಂಗಡಿಯಲ್ಲಿ ಜನರನ್ನು ಕರೆದುಕೊಂಡು ಹೋಗಿ ಟೂರ್ ಮಾಡಿಸುತ್ತೇನೆ. ನನ್ನ ಟೂರಿಸ್ಟ್ ಅಂಗಡಿ ವೆಂಕಟೇಶ್ ಎಂಬುವರ ಹೆಸರಿನಲ್ಲಿರುತ್ತದೆ. ಟೂರಿಸ್ಟ್ ಅಂಗಡಿಯಿಂದ ನನಗೆ ಸಂಪಾದನೆ ಇದೆ ಎಂದು ತೋರಿಸಲು ಲೆಕ್ಕಪತ್ರ ಇಟ್ಟಿಲ್ಲ. ನಿಡಿ 3 ರಲ್ಲಿ 1 ರಿಂದ 3 ನೇ ಪ್ರತಿವಾದಿಗಳಿಗೆ ಕೊಟ್ಟ ಹಣವನ್ನು ಸುಮಾರು ವರ್ಷಗಳಿಂದ ಕೂಡಿಟ್ಟಿದ್ದು ಸುಮಾರು 15 ವರ್ಷಗಳಿಂದ ಕೂಡಿಟ್ಟಿರುತ್ತೇನೆ ನನ್ನ ಮಗ ಸಹ ಕೆಲಸಕ್ಕೆ ಹೋಗುತ್ತಾನೆ. ನನಗೆ ಏನಾದರೂ ಆದಾಯ ಬಂದರೆ ಬ್ಯಾಂಕಿನಿಂದ ಡ್ರಾ ಮಾಡುತ್ತೇನೆ ಎಂದರೆ ನಿಜ. ನಾನು ಬ್ಯಾಂಕಿನಲ್ಲಿ ವ್ಯವಹಾರ ಮಾಡುತ್ತೇನೆ ಮತ್ತು 10 ವರ್ಷಗಳಲ್ಲಿ ಬ್ಯಾಂಕ್ ವಹಿವಾಟು ಇರುತ್ತದೆ. ನಾನು ಬೇರೆಯವರಿಗೆ ಚೆಕ್ ಕೊಡುವುದು ಮತ್ತು ಅವರಿಂದ ಚೆಕ್ ಪಡೆಯುವುದನ್ನು ಮಾಡುತ್ತೇನೆ ಎಂದರೆ ಸರಿಯಲ್ಲ. ನಿಪಿ 3 ನ್ನು ಮಾಡುವಾಗ 1 ರಿಂದ 3 ನೇ ಪ್ರತಿವಾದಿಗಳಿಗೆ ಚೆಕ್ ಮೂಲಕ ಹಣ ಕೊಡುವುದು ಉತ್ತಮ ಎಂದುನನಗೆ ಗೊತ್ತಿತ್ತು ಎಂದರೆ ನಿಜ. ಸಾಕ್ಷಿ ಮುಂದುವರೆದು ಆದರೆ 1 ರಿಂದ 3 ನೇ ಪ್ರತಿವಾದಿಗಳು ನಗದು ಹಣ ಬೇಕೆಂದು ಹೇಳಿದ್ದರು ಎಂದು ಹೇಳುತ್ತಾರೆ. ನಾನು 1 ಮತ್ತು 2 ನೇ ಪ್ರತಿವಾದಿಗಳಿಗೆ ಬ್ಯಾಂಕಿನಿಂದ ಹಣ ಡ್ರಾ ಮಾಡಿ ಹಣವನ್ನು ಕೊಟ್ಟಿಲ್ಲ.

19. ನಿಪಿ 3 ಆಗುವಾಗ 3 ನೇ ಪ್ರತಿವಾದಿ ವಯಸ್ಕರಾಗಿದ್ದರು ಎಂದರೆ ನಿಜ. ನಿಪಿ 3 ಕ್ಕೆ 3 ನೇ ಪ್ರತಿವಾದಿಯ ಸಹಿ ಪಡೆದಿಲ್ಲ ಕಾರಣ ದಾವಾ ಆಸ್ತಿ ಪಿತ್ರಾರ್ಜಿತವಾದ ಆಸ್ತಿಯಾಗಿದ್ದರಿಂದ 3 ನೇ ಪ್ರತಿವಾದಿಯ ಸಹಿ ಅವಶ್ಯಕತೆ ಇಲ್ಲ ಎಂದು ಹೇಳಿದ್ದು ಮತ್ತು ಅವರ ಸಹಿಯನ್ನು ಕ್ರಯಪತ್ರ ನೊಂದಣಿಯಾಗುವಾಗ ಮಾಡಿಸುವುದಾಗಿ 1 ಮತ್ತು 2 ನೇ ಪ್ರತಿವಾದಿಗಳು ಹೇಳಿದ್ದರು ಎಂದು ಹೇಳುತ್ತಾರೆ. 4 ಮತ್ತು 5 ನೇ ಪ್ರತಿವಾದಿಗಳಿಗೆ ಮೋಸ ಮಾಡಲು ನಾನು ಮತ್ತು 1 ಮತ್ತು 2 ನೇ ಪ್ರತಿವಾದಿಗಳು ಸೇರಿ ಸುಳ್ಳು ನಿಪಿ 3 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ರೀತಿಯಾಗಿ ಸೃಷ್ಟಿ ಮಾಡಿದ ನಿಪಿ 3 ಕ್ಕೆ 3 ನೇ ಪ್ರತಿವಾದಿ ಒಪ್ಪಲಿಲ್ಲ ಆದ ಕಾರಣ ಅವರ ಸಹಿ ಮಾಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 3 ನೇ ಪ್ರತಿವಾದಿಗೆ ಹಕ್ಕು ಇದೆಯಾ ಎಂದರೆ ದಾವಾ ಆಸ್ತಿ 3 ನೇ ಪ್ರತಿವಾದಿಯ ತಾಯಿಯ ಸ್ವಯಾರ್ಜಿತ ಆಸ್ತಿ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿಯ ತಾಯಿ ಅಂಗನವಾಡಿ ಶಿಕ್ಷಕಿಯಾಗಿದ್ದು ಅವರ ಸಂಪಾದನೆಯಿಂದ ಖರೀದಿ ಮಾಡಿದ ಆಸ್ತಿ ಎಂದು ನನಗೆ ದೃಢ ನಂಬಿಕೆ ಇರುತ್ತದೆ.

20. ನಾನು ಮತ್ತು 1 ಮತ್ತು 2 ನೇ ಪ್ರತಿವಾದಿಗಳು ಸೇರಿ 4 ಮತ್ತು 5 ನೇ ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ನಿಪಿ 3 ನ್ನು ಸೃಷ್ಟಿ ಮಾಡಿ 1 ಮತ್ತು 2 ನೇ ಪ್ರತಿವಾದಿಗಳು

ನ್ಯಾಯಾಲಯಕ್ಕೆ ಬಂದರೆ ನಿಜ ಹೊರಗೆ ಬರುತ್ತದೆ ಎಂದು ನಾನೇ ಏಕಪಕ್ಷೀಯವಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳು ನ್ಯಾಯಾಲಯಕ್ಕೆ ಬಂದರೆ ಅವರು ದಿನಾಂಕಃ 18-03-2013 ರ ಕ್ರಯದ ಕರಾರು ಪತ್ರದ ಬಗ್ಗೆ ಹೇಳಬೇಕಾಗುತ್ತದೆಂದು ಮತ್ತು ಚೆಕ್ ಮೂಲಕ ಹಣ ಪಡೆದಿರುವ ಬಗ್ಗೆ ಮತ್ತು ನಗದು ಹಣ ಪಡೆದಿರುವ ಬಗ್ಗೆ ಹೇಳಬೇಕಾಗುತ್ತದೆಂದು ದುರುದ್ದೇಶಪೂರ್ವಕವಾಗಿ ಅವರನ್ನು ನ್ಯಾಯಾಲಯಕ್ಕೆ ಬರದ ಹಾಗೆ ನೋಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**